ವಿಜಯ ಕರ್ನಾಟಕ
ಸಮಸ್ತ ಕನ್ನಡಿಗರ ಹೆಮ್ಮೆ

November 15, 2009

ಜನಗಳ ಮನ



ವಿಶ್ವೇಶ್ವರ ಭಟ್
vbhat@vijaykarnataka.com

# ರಾಜಕಾರಣಿಗಳ ಮಧ್ಯದಲ್ಲೂ ಒಬ್ಬ ವ್ಯಂಗ್ಯಚಿತ್ರಕಾರ

ರಾಜಕಾರಣಿಗಳ ಬಗ್ಗೆ ಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಗಳು ನಿತ್ಯವೂ ಪ್ರಕಟವಾಗುತ್ತವೆ. ಆದರೆ ರಾಜಕಾರಣಿಯೇ ವ್ಯಂಗ್ಯಚಿತ್ರ ಬಿಡಿಸಿದರೆ ಹೇಗಿರುತ್ತದೆ?

ನಮ್ಮ ಮಧ್ಯೆ ಅಂಥ ರಾಜಕಾರಣಿ ವ್ಯಂಗ್ಯಚಿತ್ರಕಾರರಿದ್ದಾರೆ. ಚಿತ್ರದುರ್ಗ ಕ್ಷೇತ್ರದ ಲೋಕಸಭೆ ಸದಸ್ಯರಾದ ಜನಾರ್ದನ ಸ್ವಾಮಿ ಅತ್ಯುತ್ತಮ ವ್ಯಂಗ್ಯಚಿತ್ರಕಾರರು ಎಂಬ ಸಂಗತಿ ಬಹಳ ಮಂದಿಗೆ ಗೊತ್ತಿರಲಿಕ್ಕಿಲ್ಲ. ಚುರುಕು ಗೆರೆ, ತೀಕ್ಷ್ಣ ನೋಟ, ತಿಳಿಹಾಸ್ಯ ಹಾಗೂ ಕೊನೆಯಲ್ಲೊಂದು ಸಂದೇಶ ಅವರ ವ್ಯಂಗ್ಯಚಿತ್ರದ ವೈಶಿಷ್ಟ್ಯ. ಲೋಕಸಭೆ ಸದಸ್ಯರೊಬ್ಬರು ವ್ಯಂಗ್ಯಚಿತ್ರಕಾರರಾಗಿರುವ ಮತ್ತೊಂದು ನಿದರ್ಶನ ಇರಲಿಕ್ಕಿಲ್ಲ. ಆ ದೃಷ್ಟಿಯಿಂದ ಜನಾರ್ದನ ಸ್ವಾಮಿ ಭಿನ್ನರಾಗಿ ಎದ್ದುನಿಲ್ಲುತ್ತಾರೆ.

ಕಾಲೇಜಿನಲ್ಲಿ ಮೇಷ್ಟ್ರು ಪಾಠ ಮಾಡುವಾಗ ಬೋರ್ ಆದಾಗ, ತಮ್ಮ ಪಾಡಿಗೆ ಕಾರ್ಟೂನ್ ಬಿಡಿಸುವುದನ್ನು ರೂಢಿಸಿಕೊಂಡ ಸ್ವಾಮಿ ಯವರಿಗೆ, ವಿದ್ಯಾಭ್ಯಾಸ ಮುಗಿಸಲು ಇದೇ ಹಣದ ಮೂಲವಾಯಿತು ಅಂದರೆ ಅಚ್ಚರಿ ಯಾಗಬಹುದು. ಪಿಯುಸಿ ಓದುವಾಗಲೇ ವ್ಯಂಗ್ಯಚಿತ್ರಗಳನ್ನು ಬಿಡಿಸಲಾರಂಭಿಸಿದ ಅವರು, ಕನ್ನಡದ ವಾರಪತ್ರಿಕೆಗಳಿಗೆ ಅವುಗಳನ್ನು ಕಳುಹಿಸಿ ಕೊಡುತ್ತಿದ್ದರು. ದಾವಣಗೆರೆಯಲ್ಲಿ ಎಂಜಿನಿಯರಿಂಗ್ ಓದುವಾಗ ಸ್ಥಳೀಯ 'ಜನತಾವಾಣಿ' ಪತ್ರಿಕೆಗೆ ರೆಗ್ಯುಲರ್ ಆಗಿ ಕಾರ್ಟೂನ್‌ಗಳನ್ನು ಕಳಿಸುತ್ತಿದ್ದರು. ವೈಜ್ಞಾನಿಕ ವಿಷಯಕ್ಕೆ ಸಂಬಂಧಿಸಿದ ಕಾರ್ಟೂನ್ ಗಳನ್ನು ಬರೆಯುವವರು ಯಾರೂ ಇರದಿದ್ದ ಆ ದಿನಗಳಲ್ಲಿ ಸ್ವಾಮಿ ಆ ಕ್ಷೇತ್ರದಲ್ಲಿ ಸಾಕಷ್ಟು ಕೃಷಿ ಮಾಡಿದರು. Electronics For You ಪತ್ರಿಕೆಗೆ ಕಾರ್ಟೂನಿಸ್ಟ್ ಆಗಿ ಕೆಲಸ ಮಾಡಿದರು.

ವಿದ್ಯಾರ್ಥಿಯಾಗಿರುವಾಗ ದಿನಕ್ಕೆ ಒಂದೆರಡು ತಾಸು ಕಾರ್ಟೂನ್ ಗೀಚಿ ಪತ್ರಿಕೆಗಳಿಗೆ ಕಳುಹಿಸುತ್ತಿದ್ದುದರಿಂದ, ತಿಂಗಳಿಗೆ ಸಂಭಾವನೆ ರೂಪದಲ್ಲಿ ಐದಾರು ಸಾವಿರ ರೂ. ಸಿಗುತ್ತಿತ್ತು. ಆ ದಿನಗಳಲ್ಲಿ ಅಷ್ಟೊಂದು ಹಣ ಅವರ ಲೆಕ್ಚರರ್‌ಗೂ ಸಿಗುತ್ತಿರಲಿಲ್ಲ. ಬಡಕುಟುಂಬದಿಂದ ಬಂದ ಅವರು ಎಂಜಿನಿಯರಿಂಗ್ ಮುಗಿಸಿದ್ದೇ ಹವ್ಯಾಸಕ್ಕೆಂದು ಶುರುಮಾಡಿದ ಕಾರ್ಟೂನಿಂಗ್ ಕೈಹಿಡಿದಿದ್ದರಿಂದ.

ಜನಾರ್ದನ ಸ್ವಾಮಿ ಆನಂತರ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲೂ ಕಾರ್ಟೂನಿಂಗ್‌ನಲ್ಲಿ ಹೆಸರು ಮಾಡಿದರು. ನಾಲ್ಕು ಸಲ ರಾಜ್ಯಮಟ್ಟದ ಹಾಗೂ ಒಂದು ಬಾರಿ

ರಾಷ್ಟ್ರಮಟ್ಟದ ವ್ಯಂಗ್ಯಚಿತ್ರ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದರು.




ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ಹೋಗಿ, ಅಲ್ಲಿ ಉದ್ಯೋಗಕ್ಕೆಂದು ನೆಲೆಸಿದಾಗ ವ್ಯಂಗ್ಯಚಿತ್ರ ಬಿಡಿಸುವುದು ಕಡಿಮೆಯಾಯಿತು. ಹಾಗೆಂದು ಅದನ್ನು ಬಿಡಲಿಲ್ಲ. ಬಿಡುವಿನ ವೇಳೆಯಲ್ಲಿ ಪ್ರಚಲಿತ ವಿದ್ಯಮಾನಗಳ ಬಗ್ಗೆ ಚಿತ್ರಗಳನ್ನು ಎಳೆಯುತ್ತಿದ್ದರು.

ಈಗಂತೂ ಅವರು ಸಂಸತ್ಸದಸ್ಯರು. ಕೈತುಂಬಾ ಕೆಲಸ, ಪ್ರವಾಸ, ಓಡಾಟ, ಜನಸಂಪರ್ಕ, ಕಾರ್ಯಕ್ರಮ, ಮೀಟಿಂಗ್, ಪಕ್ಷದ ಕೆಲಸ, ಜನರ ಕುಂದುಕೊರತೆ ಹೀಗೆ ಹತ್ತಾರು ಕೆಲಸಕಾರ್ಯ. ಇವೆಲ್ಲವುಗಳ ನಡುವೆ ವ್ಯಂಗ್ಯಚಿತ್ರಗಳನ್ನು ಎಳೆಯಲು ಸಮಯವಾದರೂ ಎಲ್ಲಿ? ಎಳೆಯುತ್ತಾ ಕುಳಿತರೆ ಕ್ಷೇತ್ರದ ಜನತೆ ವ್ಯಂಗ್ಯ ಮಾಡದೇ ಬಿಟ್ಟಾರಾ?

ಆದರೆ ಸ್ವಾಮಿ ತಮ್ಮ ವ್ಯಕ್ತಿತ್ವದ ಒಂದು ಭಾಗವೇ ಆಗಿರುವ ಕಾರ್ಟೂನಿಂಗ್ ಅನ್ನು ಬಿಟ್ಟಿಲ್ಲ. ಹತ್ತು ನಿಮಿಷ ಸಮಯ ಸಿಕ್ಕರೆ, ಚಕ್ಕೆಂದು ಐಡಿಯಾ ಹೊಳೆದರೆ ಅಲ್ಲಿಯೇ ಗೆರೆಗಳಿಗೆ ಜೀವ ತುಂಬುತ್ತಾರೆ. ಇಂಥ ಚಿತ್ರಗಳನ್ನು 'ವಿಜಯ ಕರ್ನಾಟಕ'ಕ್ಕೆ ಕಳುಹಿಸಿಕೊಡಿ ಎಂದು ಜನಾರ್ದನ ಸ್ವಾಮಿಯವರಿಗೆ ವಿನಂತಿಸಿ ಕೊಂಡಿದ್ದೇನೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ.

ಪ್ರಸ್ತುತ ಬಿಜೆಪಿ ಬಿಕ್ಕಟ್ಟಿನ ಬಗ್ಗೆ ಆ ಪಕ್ಷದ ಸಂಸದರೇ ವ್ಯಂಗ್ಯಚಿತ್ರ ಬಿಡಿಸಿದರೆ ಹೇಗಿರುತ್ತದೆ? ಮುಖ್ಯಮಂತ್ರಿ ಯಡಿಯೂರಪ್ಪನವರು ನಗದಿದ್ದರೂ ಪರವಾಗಿಲ್ಲ, ಪಕ್ಷದ ಅಧ್ಯಕ್ಷ ಸದಾನಂದಗೌಡರು ಷೋಕಾಸ್ ನೀಡದಿದ್ದರೆ ಸಾಕು.